ಕರ್ತವ್ಯಜ್ಞಾನವನ್ನು ಮಾಡಿಕೊಡುವ ಗ್ರಂಥದ ಜನ್ಮಭೂಮಿಯಾದ ಭರತಭೂಮಿಯೆ, ನೀನು ಧನ್ಯೆ! ಶ್ರೀಕೃಷ್ಣ, ಸಹಸ್ರಶಃ ವಂದನೆಗಳು ನಿನಗೆ!

**30-11-41 ರಾತ್ರಿ 8.25**

ಬಾವಿಯ ಮತ್ತು ಮನೆಯ ಕೆಲಸವು ಸಾಗಿದೆ. ಬಾವಿಗೆ ನೀರು ಇನ್ನೂ ಇಲ್ಲ. ಶ್ರೀಹರಿ, ಕೃಪೆದೋರು.

ಇಂದು ಶಾಲೆಯಲ್ಲಿ 7ನೆಯ ಇಯತ್ತೆಯ ವಿದ್ಯಾರ್ಥಿಗಳ ಸಂಮೇಲನವು. ಬೆಳಗಿನಲ್ಲಿ ಛಾಯಾಚಿತ್ರ. ಸಾಯಂಕಾಲ ಉಪಾಹಾರ. ಎರಡಕ್ಕೂ ಹೋಗಿದ್ದೆನು. ರಾತ್ರಿ ನಾಟಕಗಳು. ಹೋಗಲಾರೆನು. ಸುಬ್ಬವ್ವ ಮತ್ತು ಶ್ರೀನಿವಾಸನು ಹೋಗಿದ್ದಾರೆ.

ಕೀರ್ತಿಯ ಲೋಭವೂ ಬೇಡ. ದೇವಾ, ನಿನ್ನ ಅಡಿಯಲ್ಲಿ ನನಗೆ ನಿಶ್ಚಲವಾದ ಭಕ್ತಿ ಒದಗುವಂತೆ ಮಾಡಯ್ಯಾ!

**ಎನ್ನೊಡಲು ಬಗೆ ಮೆದುಳು**
**ನಿನ್ನಡಿಗೆ ಮುಡುಪಾಗಿ**
**ನಿನ್ನ ಸೇವೆಗೆ ಸಲ್ವು-**
**ವಿನ್ನೆಂದು, ತಂದೆಯೇ?**

**1-12-41 ರಾತ್ರಿ 9.30**

ಹೈದರಾಬಾದದಿಂದ ತಂತಿ. ನಾನು ಅಲ್ಲಿ ನೆರೆಯಲಿರುವ ಸಾಹಿತ್ಯ ಸಮ್ಮೇಳನದ ಅಂಗವಾದ ಕವಿಗೋಷ್ಠಿಗೆ ಅಧ್ಯಕ್ಷನಾಗಿ ಆರಿಸಲ್ಪಟ್ಟಿರುವೆನೆಂದು, ಮತ್ತು ನಾನು ಒಪ್ಪಬೇಕೆಂದು. ಒಪ್ಪಲು ಅಷ್ಟು ಮನಸ್ಸಿಲ್ಲ. ಮಿತ್ರರ ಆಗ್ರಹ. ಒಪ್ಪುವೆನು. ನಾಳೆ ತಂತಿಯಿಂದ ಉತ್ತರ ಕಳಿಸುವೆನು. ಹುಬ್ಬಳ್ಳಿಯ ಮಿತ್ರರೂ ನಾನು ಒಪ್ಪಲೇಬೇಕೆಂಬ ಅಭಿಪ್ರಾಯದವರು. ಶ್ರೀಹರಿ, ಈ ಅಧ್ಯಕ್ಷಪದವು ನಿನ್ನಡಿಗೆ ಸಮರ್ಪಿತವಾಗಿರಲಿ ತಂದೆ! ಯೋಗ್ಯ ರೀತಿಯಿಂದ ಕರ್ತವ್ಯವನ್ನು ನೆರವೇರಿಸಲು ಸಾಮರ್ಥ್ಯವನ್ನು ಕರುಣಿಸು ನನಗೆ, ಪ್ರಭುವೆ.

ಇತ್ತ ಧಾರವಾಡದಲ್ಲಿ ಕೆಲರು ನಿರರ್ಗಲವಾಗಿ ಬಯ್ಯುವವರು, ಅತ್ತ ಹೈದರಾಬಾದದಲ್ಲಿ ಉದಾರ ಮನಸ್ಸಿನ ಸಜ್ಜನರು ಆದರದಿಂದ ನನಗೆ ಕವಿಗೋಷ್ಠಿಯ ಅಧ್ಯಕ್ಷಪದವನ್ನು ಕೊಡುವರು! ಆಶ್ಚರ್ಯವಲ್ಲವೆ?



ಸಾಲಿ ರಾಮಚಂದ್ರರಾಯರ ಮನೆ

**ಒಂದೆಡೆಗೆ ಬೆಯ್ವರಿ-**
**ನ್ನೊಂದೆಡೆಗೆ ಮುಂದೆ ಬಾ-**
**ರೆಂದು ಕರೆವರು ನಲುಮೆ-**
**ಯಿಂದಿದೇನಚ್ಚರಿಯೊ!**

ಈ ಬಯ್ಯುವವರೂ ಮುಂದೆ ಬಾರೆಂದು ಕರೆವವರೂ ಎಲ್ಲರೂ ನಿನ್ನವರೆ, ತಂದೆ. ಅವರೂ ಇವರೂ ನಾನೂ ನಿನ್ನ ಮಕ್ಕಳೆ ಅಲ್ಲವೆ? ಎಲ್ಲರಲ್ಲಿಯೂ ನನಗೆ ಪ್ರೇಮವಿರಲಿ, ನಾನು ಎಲ್ಲರವನು ಆಗಿರುವಂತೆ ಮಾಡು, ಸ್ವಾಮಿ ಶ್ರೀಹರಿ.

**ಎಲ್ಲರಿಂದಲು ಭಿನ್ನ-**
**ನಲ್ಲವೆಂದಿರಲಿ ನ-**
**ನ್ನಲ್ಲಿ ಭಾವನೆ, ತಂದೆ!**
**ಎಲ್ಲರೂ ನಿನ್ನವರು.**

**2-12-41 ರಾತ್ರಿ 8.30**

ಬೆಳಗಿನಲ್ಲಿ ಹೈದರಾಬಾದಕ್ಕೆ ಕವಿಗೋಷ್ಠಿಯ ಅಧ್ಯಕ್ಷನಾಗಲು ಒಪ್ಪುವೆನೆಂದು ತಂತಿಯಿಂದ ತಿಳಿಸಿದೆನು. ಪತ್ರವನ್ನೂ ಬರೆದೆನು. ಇನ್ನು ಅಧ್ಯಕ್ಷ ಭಾಷಣವನ್ನು ಸಿದ್ಧಗೊಳಿಸಬೇಕು. ಶ್ರೀಹರಿ, ನನಗೆ ಸಾಮರ್ಥ್ಯವನ್ನು ದಯೆಪಾಲಿಸು.

ಇಂದು ಶಕುಂತಲಾಬಾಯಿಯವರಲ್ಲಿ ಊಟಕ್ಕೆ ಆಮಂತ್ರಿತನಾಗಿ ಹೋಗಿದ್ದೆನು. ಶ್ರೀ ಭಾರತ